ಅದನ್ನು ಮತ್ತೆ ಪರಿಶೀಲನೆ ಮಾಡಿಸುವುದಕ್ಕೆ ಡಿವಿಜನಲ್ ಕಮಿಷನರ್ ಅಧ್ಯಕ್ಷರಾಗಿರುವಂಥ ಕಮಿಟಿಗೆ ಕಳುಹಿಸಿಕೊಡುತ್ತೇವೆ. ಆದಷ್ಟು ಬೇಗ ಈ ಕಾರ್ಯಕ್ರಮವನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

10.40 ಎ.ಎಂ

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ : ಆ ಅಣೆಕಟ್ಟು ಸುಮಾರು 15 ವರ್ಷಗಳ ಹಿಂದೆ ಪೂರ್ಣವಾಗಿದ್ದರೂ ಕೂಡ ಈ ಶೀತಲ ಪ್ರದೇಶದವರಿಗೆ ಇನ್ನೂ ಪರಿಹಾರ ಕೊಡಲಿಲ್ಲ, ಶಿಫ್ಟ್ ಮಾಡಲಿಲ್ಲ ಎಂದರೆ ಇನ್ನೂ ಎಷ್ಟು ವರ್ಷ ಬೇಕು? ದಯವಿಟ್ಟು ತಾವು ತ್ವರಿತವಾಗಿ ಪ್ರದೇಶವನ್ನು ಶಿಫ್ಟ್ ಮಾಡಬೇಕು ಮತ್ತು ಅವರಿಗೆ ವಸತಿಯನ್ನು ಕೊಡುವಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಅದನ್ನು ಬೇಗನೆ ಮಾಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಅದು ನಿಜ ಇದೆ. ನನಗೆ ತಿಳಿದಿರುವ ಮಾಹಿತಿ ಪ್ರಕಾರ 310ಕೋಟಿ ರೂಪಾಯಿ ಖರ್ಚು ಮಾಡಿ ನಾವು 40819ಹೆಕ್ಟೇರ್ ನೀರು ಕೊಟ್ಟಿದ್ದೇವೆ. ಆದರೆ ಇದನ್ನು ಅವರು ಗಮನ ಹರಿಸಿಲ್ಲ. ಆ ಮಾತನ್ನು ನಾನು ಒಪ್ಪಿಕೊಂಡಿದ್ದೇನೆ. ಡಿವಿಜನಲ್ ಕಮಿಷನರ್ ಅವರಿಗೆ ಈ ಕೂಡಲೇ ಆದೇಶವನ್ನು ಕೊಡುತ್ತೇನೆ. ನಮ್ಮ ಡಿಪಾರ್ಟ್‌ಮೆಂಟಿಗೆ ಆದೇಶ ಕೊಡುತ್ತೇನೆ. ಎಸ್ಟಿಮೇಟ್ ಮಾಡಿ, ಒಂದು, ಒಂದೂವರೆ ವರ್ಷದಲ್ಲಿ ಸಂಪೂರ್ಣವಾಗಿ 15ಗ್ರಾಮಗಳಿಗೂ ಪುನರ್ ವ್ಯವಸ್ಥೆ ಮಾಡತಕ್ಕಂಥ ಕೆಲಸವನ್ನು ಮುಗಿಸಬೇಕು ಎನ್ನತಕ್ಕ ಸ್ಪಷ್ಟ ಆದೇಶವನ್ನು ನಾವು ಕೊಡುತ್ತೇವೆ ಎನ್ನತಕ್ಕ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ : ಬೇಗನೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕೆ. ಎನ್. ನಾಗೇಗೌಡ : ಆಗಬಹುದು.

## ಬಾದಾಮಿ ತಾಲ್ಲೂಕು ಕುಳಗೇರಿ ಕ್ರಾಸಿನಲ್ಲಿ 33 ಕೆ.ವ್ಹಾ ವಿದ್ಯುತ್ ಸ್ಟೇಷನ್

458 - ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಬಾದಾಮಿ ತಾಲ್ಲೂಕು ಕುಳಗೇರಿ ಕ್ರಾಸ್‌ನಲ್ಲಿ 33 ಕೆ.ವಿ ವಿದ್ಯುತ್ ವಿತರಣಾ ಕೇಂದ್ರಕ್ಕೆ ತಾಂತ್ರಿಕ ಹಾಗೂ ಆಡಳಿತಾತ್ಮಕ ಮಂಜೂರಾತಿ ಯಾವಾಗ ನೀಡಲಾಗಿದೆ?*

*ಆ) ಹಾಗಿದ್ದಲ್ಲಿ 1997-98ರಲ್ಲಿ ಈ ಯೋಜನೆಗೆ ಎಷ್ಟು ಮೊತ್ತದ ಅನುದಾನ ಒದಗಿಸಲಾಗುತ್ತಿದೆ?*

*ಇ) ಈ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ಮತ್ತು ಯಾವಾಗ ಅಂತಿಮ ಸ್ವರೂಪ ನೀಡಲಾಗುವುದು?*

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಆ) ಬಾದಾಮಿ ತಾಲ್ಲೂಕು ಕುಳಗೇರಿ ಕ್ರಾಸ್‌ನಲ್ಲಿ 33 ಕೆ.ವಿ. ವಿದ್ಯುತ್ ಉಪ ಕೇಂದ್ರ ಸ್ಥಾಪಿಸಲು 27.12.95ರಂದು ತಾಂತ್ರಿಕ ಮಂಜೂರಾತಿ ನೀಡಲಾಗಿದೆ. ಮಂಡಳಿಯು ಆರ್ಥಿಕ ಮುಗ್ಗಟ್ಟಿನಿಂದಾಗಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿಲ್ಲ.

ಆ) ಮೇಲೆ ತಿಳಿಸಿದ ಕಾರಣದಿಂದಾಗಿ ಈ ಯೋಜನೆಗೆ ಅನುದಾನ ಒದಗಿಸಲಾಗಿರುವುದಿಲ್ಲ.

ಇ) 9ನೇ ಯೋಜನೆಯ ಅಡಿಯಲ್ಲಿ ಈ ಕಾಮಗಾರಿಯನ್ನು ಸೇರಿಸಲಾಗಿದ್ದು, 98-99ರಲ್ಲಿ ಅಂತಿಮ ಸ್ವರೂಪವನ್ನು ಕೊಡಲು ಉದ್ದೇಶಿಸಲಾಗಿದೆ.

ಅಧ್ಯಕ್ಷರು : ತಾಂತ್ರಿಕ ಮಂಜೂರಾತಿ ಕೊಟ್ಟಿದ್ದೀರಿ. ಆಡಳಿತಾತ್ಮಕ ಮಂಜೂರಾತಿ ಕೊಟ್ಟಿಲ್ಲ, ಹಣ ಇಲ್ಲ. ಅವರ ಉಪ ಪ್ರಶ್ನೆ ಅದೇ, ಕ್ಷೇತ್ರದ ಕೆಲಸ ಮಾಡಿ ಕೊಡಿ. ಯಾವಾಗ ಮಾಡುತ್ತೀರಿ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ಅಧ್ಯಕ್ಷರೆ, ನಮ್ಮ ರಕ್ಷಣೆಗೆ ತಾವೇ ಬರಬೇಕು.

ಶ್ರೀ ಶರಣಬಸಪ್ಪ ದರ್ಶನಾಪುರ್ : ಮುಂದಿನ ವರ್ಷ 1997-98ರಲ್ಲಿ ಮಾಡಿ ಕೊಡುತ್ತೇವೆ. ಈ ವರ್ಷದಲ್ಲಿ ಕಾರ್ಯಕ್ರಮ ತೆಗೆದುಕೊಂಡಿರುತ್ತಾರೆ. ಈಗಾಗಲೇ 9ನೇ ಪ್ಲಾನ್‌ನಲ್ಲಿ ಸೇರಿಸಿ ಮುಂದಿನ ವರ್ಷ ಕೆಲಸ ಪ್ರಾರಂಭ ಮಾಡಿ 1999ರೊಳಗಡೆ ಪೂರ್ತಿ ಕೆಲಸ ಮಾಡಿಕೊಡುತ್ತೇವೆ.

ಅಧ್ಯಕ್ಷರು : 1998ನೇ ಮಾರ್ಚ್‌ಗೆ ಕೆಲಸ ಶುರು ಮಾಡುತ್ತಾರೆ. ಇನ್ನೇನು ಬಂದೇ ಬಿಟ್ಟಿತು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ಬಹಳ ನಿಧಾನ ಆಯಿತು.

ಅಧ್ಯಕ್ಷರು : ಇದೊಂದು ನಾಲ್ಕು ತಿಂಗಳು ಅಥವಾ ಎರಡು ಆರು ತಿಂಗಳು ಅಷ್ಟೇ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ತಾವು 1998ಕ್ಕೆ ಕೆಲಸ ಪ್ರಾರಂಭ ಮಾಡುವಿರಂತೆ. ಈಗ 1995ರಲ್ಲಿ ತಾವು ತಾಂತ್ರಿಕ ಮಂಜೂರಾತಿ ನೀಡಿ ಇಲ್ಲಿಯವರೆಗೂ ಆಡಳಿತಾತ್ಮಕ ಮಂಜೂರಾತಿ ನೀಡಿಲ್ಲ. ಇದರ ಎಸ್ಟಿಮೇಟೆಡ್ ಕಾಸ್ಟ್ ಎಷ್ಟು ಮತ್ತು ಈ ವರ್ಷ ಅಂದರೆ 1997-98ಕ್ಕೆ ಕೆಲಸ ಪ್ರಾರಂಭಿಸುವುದಕ್ಕೆ ಎಷ್ಟು ಕೋಟಿ ಹಣ ಬೇಕಾಗುತ್ತದೆ?

ಅಧ್ಯಕ್ಷರು : ನೋಡಿ, ಇನ್ನೂ ಬೇಗ ಏನಾದರೂ ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಶರಣಬಸಪ್ಪ ದರ್ಶನಾಪುರ್ : ಎಸ್ಟಿಮೇಟ್ ಮಾಡುತ್ತೇವೆ. ಮಾರ್ಚ್ ನಂತರ ಕೆಲಸ ಕೈಗೊಳ್ಳುತ್ತೇವೆ.

ಅಧ್ಯಕ್ಷರು : ಫಂಡ್ಸ್ ಅವೈಲಬಿಲಿಟಿ ಇದ್ದರೆ.

ಶ್ರೀ ಶರಣಬಸಪ್ಪ ದರ್ಶನಾಪುರ್ : 9ನೇ ಯೋಜನೆಯಲ್ಲಿ ಮಾಡಬೇಕೆಂದು ಪ್ಲಾನ್ ಇಟ್ಟುಕೊಂಡಿದ್ದೇವೆ.